
ನಾಂದಿಪದ

# ಹೊಸತಿನ ಹಂಬಲ

**ಹೊಸತೆಂದರೆ** ಏನು? ಅದು ಜೀವನವಲ್ಲದೆ ಬೇರೇನೂ ಅಲ್ಲ ಎನ್ನುವ ಮಾತಿದೆ. ಬೇಂದ್ರೆಯವರು ಹೇಳಿದಂತೆ ಪ್ರಕೃತಿಗಾದರೆ, 'ವರುಷಕೊಂದು ಹೊಸತು ಜನ್ಮ.' ಆ ಹೊಸತನ್ನು ಮನುಷ್ಯ ಪ್ರಯತ್ನಪೂರ್ವಕವಾಗಿ ಪಡೆಯಬೇಕು; ಹೊಸತಿನ ಪ್ರಯತ್ನ ಮಾಡುವ ಕೆಲಸಗಳಲ್ಲಿ ಮೈದಳೆಯಬೇಕು. 'ಮಯೂರ'ದ ಹೊಸತಿನ ಹಂಬಲವನ್ನು ಈ ಸಂಚಿಕೆಯ ಭಾವ–ಬಣ್ಣಗಳಲ್ಲಿ ಕಾಣಬಹುದು. ಮಳೆಗಾಲ ಜೀವಜಗತ್ತಿನ ಆರ್ದ್ರತೆ–ಕಾವು ಹೆಚ್ಚಿಸುವ ಸಂದರ್ಭ. ಆ ಜೀವಸಂಚಾರಕ್ಕೆ ಮಯೂರವೂ ತನ್ನನ್ನೊಡ್ಡಿಕೊಂಡಿದೆ.

ವಿನ್ಯಾಸದಲ್ಲಿ ಮತ್ತಷ್ಟು ಒಪ್ಪ ಓರಣದ ಹಂಬಲವನ್ನು ಸಂಚಿಕೆಯ ಪುಟಗಳಲ್ಲಿ ಕಾಣಬಹುದು. ಓರಣದ ಜೊತೆಗೆ ಹೂರಣದಲ್ಲೂ ವೈವಿಧ್ಯವಿದೆ. ಪುಸ್ತಕ ವಿಮರ್ಶೆಯ ಜೊತೆಗೆ, ಪುಸ್ತಕ ಪರಿಚಯದ ಟಿಪ್ಪಣಿಗಳ 'ಪುಸ್ತಕ ಪರಾಗ' ಸೇರ್ಪಡೆಯಾಗಿದೆ. ಪುಸ್ತಕಗಳಿಂದ ಹೆಕ್ಕಿದ ಕಥನ–ಕಾಣ್ಕೆಗಳ 'ಪುಟ ಬಂಗಾರ'ದ ನವಿಲುಗರಿಯಿದೆ. ಕನ್ನಡ ನಾಡು–ನುಡಿಯ ಸೌಂದರ್ಯವನ್ನು ಸದ್ದಿಲ್ಲದೆ ಹೆಚ್ಚಿಸುವ ಸಾಧಕರ ಬಗ್ಗೆ ಗಮನಸೆಳೆಯುವ 'ಜನ–ಪದ', ಕನ್ನಡ ಸಾಹಿತ್ಯ ಪರಂಪರೆಯಲ್ಲಿನ ಅರಿವನ್ನು ಕಾಣಿಸುವ 'ಕನ್ನಡ ವಿವೇಕ' ಪುಟಗಳಿವೆ. ಸಹೃದಯರ ಮನಸ್ಸಿನಲ್ಲಿ ಅಚ್ಚೊತ್ತಿದ ಕನ್ನಡ ಸಾಹಿತ್ಯಕೃತಿಗಳಲ್ಲಿನ ಅಸಾಧಾರಣ ಪಾತ್ರಗಳನ್ನು ಗುರ್ತಿಸುವ 'ಚಿತ್ತ ಕೆತ್ತಿದ ಚಿತ್ರ' ಮತ್ತೊಂದು ಹೊಸ ಪುಟ. ಹೊಸ ಬರಹಗಳು ಗಾತ್ರದಲ್ಲಿ ಕಿರಿದಾದರೂ, ಸಂಚಿಕೆಯ ಒಟ್ಟಾರೆ ಸೌಂದರ್ಯ ಹಾಗೂ ಓದಿನ ರುಚಿಯನ್ನು ಹೆಚ್ಚಿಸಬಲ್ಲವು ಎನ್ನುವುದು ನಮ್ಮ ನಂಬಿಕೆ.



ನೊಬೆಲ್ ಪ್ರಶಸ್ತಿ ಪುರಸ್ಕೃತ ಸ್ಪ್ಯಾನಿಶ್ ಲೇಖಕ ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಜ್ ತನ್ನ ಜೀವಿತದ ಕಡೆಯ ದಿನಗಳಲ್ಲಿ ನೆನಪುಗಳನ್ನು ಕಳೆದುಕೊಂಡ. ಬರಹಗಾರನ ನೆನಪು ಮಸುಕಾಗತೊಡಗಿದರೆ ಅವನ ಬರವಣಿಗೆಯೂ ನಿಲ್ಲುತ್ತದೆ. ಮಾರ್ಕ್ವೆಜ್‌ನ ನೆನಪುಗಳು ಮರುಕಳಿಸದ ಕೊನೆಯ ಕಾಲದ ಬಗೆಗಿನ 'ಮಾಂತ್ರಿಕ ಮಾರ್ಕ್ವೆಜ್‌ಗೆ ಮರೆವು ಬಂದಾಗ' ಬರಹ ಈ ಸಂಚಿಕೆಯ ವಿಶೇಷ. ಆಧುನಿಕ ಜಗತ್ತು ಕಂಡ ಬಹುದೊಡ್ಡ ಮಾನವತಾವಾದಿ ಮತ್ತು ಕಥೆಗಾರನ ಬದುಕಿಗೆ ಸಂಬಂಧಿಸಿದ ಕಥನ 'ಮಯೂರ' ಓದುಗರಿಗೆ ಇಷ್ಟವಾಗುತ್ತದೆನ್ನುವ ನಂಬಿಕೆ ನಮ್ಮದು.

'ಬೂಕರ್ ಪ್ರಶಸ್ತಿ' ಪುರಸ್ಕೃತ ಬರಹಗಾರ್ತಿ ಗೀತಾಂಜಲಿ ಶ್ರೀ ಅವರ ಸಂದರ್ಶನ ಹಾಗೂ ಪುರಸ್ಕೃತ ಕಾದಂಬರಿ ಕುರಿತ ವಿಶ್ಲೇಷಣೆ ಈ ಸಂಚಿಕೆಯ ಮತ್ತೊಂದು ವಿಶೇಷ. ಎಂದಿನಂತೆಯೇ ಕಥೆ–ಕವಿತೆ–ಪ್ರಬಂಧಗಳ ಹೊಸ ಕೊಯಿಲು, ಅಂಕಣಗಳ ಹೊಳಪು ಈ 'ಮಳೆಗಾಲದ ಸಂಚಿಕೆ'ಯಲ್ಲಿದೆ.

ಮತ್ತೆ ಮಳೆ ಹೊಯ್ಯುತಿದೆ... ಮಯೂರ ನಿಮ್ಮ ಜೊತೆಗಿದೆ.

**ಮಯೂರ ಬಳಗ**